# ಅಡ್ಡಾದಲ್ಲಿ 'ಮೆರವಣಿಗೆ'



'ನಾನು ಐಟಂ ಹುಡುಗಿ ಅಲ್ಲ. ಮಹೇಶಣ್ಣನಿಗಾಗಿ ಈ ಸಿನಿಮಾದಲ್ಲಿ ಕುಣಿದಿದ್ದೇನೆ ಅಷ್ಟೆ. ಹಾಡು ಕೂಡ ಮಜವಾಗಿದೆ. ಯೋಗರಾಜ ಭಟ್ ಸಾಹಿತ್ಯ ಕಚಗುಳಿ ಇಡುವಂತಿದೆ' ಎನ್ನುವ ಅರ್ಥದ ಮಾತನ್ನು ಐಂದ್ರಿತಾ ರೇ ತಮ್ಮದೇ ವಿಶಿಷ್ಟ ಕನ್ನಡದಲ್ಲಿ ನಿಧಾನವಾಗಿ ಹೇಳಿದರು. ಮಾತಿನ ಕೊನೆಗೆ ಅವರು ಮತ್ತೆ ಒತ್ತಿ ಹೇಳಿದ್ದು– 'ನಾನು ಐಟಂ ಗರ್ಲ್ ಅಲ್ಲ. ಮುಂದೆ ಯಾವ ಸಿನಿಮಾದಲ್ಲೂ ಐಟಂ ನೃತ್ಯ ಮಾಡೊಲ್ಲ'.

ಐಂದ್ರಿತಾ ಹೆಜ್ಜೆ ಹಾಕುತ್ತಿದ್ದುದು 'ಪ್ರೇಮ್ ಅಡ್ಡಾ' ಸಿನಿಮಾದ ಗೀತೆಗೆ. 'ಕೊಂಕಣ ಸುತ್ತಿ ಮೈಲಾರಕ್ಕೆ ಬಂದೆ ನಾನು / ಅಡ್ಡ ಸಿಗಬೇಡಿ ತುಂಬಾ ಸ್ಪೀಡು ನಾನು' ಎನ್ನುವುದು ಹಾಡಿನ ಪಲ್ಲವಿ. ಈ ಗೀತೆಗಾಗಿ ನೃತ್ಯ ನಿರ್ದೇಶಕ ಹರ್ಷ ವಿಶೇಷ ಕೊರಿಯೊಗ್ರಫಿ ಮಾಡಿದ್ದಾರಂತೆ. ಗೀತೆಯಲ್ಲಿ ಐಂದ್ರಿತಾ ಹೆಸರು ಬಸಂತಿ ಅಂತೆ. ಹಾಡಿನಲ್ಲಿನ ಕಥೆಯನ್ನು ನಂಬುವುದಾದರೆ, ಈ ಬಸಂತಿಗೆ ನೂರು ಬಾಯ್‌ಫ್ರೆಂಡ್ಸ್ ಹಾಗೂ ಆರು ಹಸ್‌ಬೆಂಡ್ಸ್. ಎಲ್ಲರೂ ಕೈಕೊಟ್ಟಿದ್ದರಿಂದ ಕಂಗಾಲಾದ ಹೆಣ್ಣುಮಗಳು ಅಡ್ಡಾ ದಿಡ್ಡಿ ಕುಣಿಯುವ ಗೀತೆಯಿದು. ಹಾಡಿನ ಸಾಹಿತ್ಯ ಹಾಗೂ ಬಸಂತಿ ಎನ್ನುವ ಹೆಸರು ಐಂದ್ರಿತಾಗೆ ಸಿಕ್ಕಾಪಟ್ಟೆ ಇಷ್ಟವಾಗಿದೆ.

ಅಂದ ಹಾಗೆ, ಬಸಂತಿಯ ಕಥನಕ್ಕೆ ಕುಣಿಯಲು 'ಅಡ್ಡಾ' ಬಳಗ ಮೊದಲು ಯೋಚಿಸಿದ್ದು ಸನ್ನಿ ಲಿಯೋನ್ ಅವರನ್ನು. ಅತ್ತ ಕಡೆಯಿಂದ 'ಸಿಗ್ನಲ್' ಸಿಗದೇ ಹೋದಾಗ, ತುಪ್ಪದ ಹುಡುಗಿ ರಾಗಿಣಿಯನ್ನು ಸಂಪರ್ಕಿಸಲಾಗಿದೆ. ರಾಗಿಣಿಯೇನೂ ಒಲ್ಲೆ ಎಂದಿಲ್ಲ. ಆದರೆ, ಎರಡು ಮೂರು ಸಲ ಡೇಟ್ಸ್ ಹೊಂದಾಣಿಕೆ ಆಗದೆ ಹೋದುದರಿಂದ ಆಕೆ ಅಡ್ಡಾದತ್ತ ಮುಖ ಹಾಕದೆ ಹೋದರು. ಹಾಗಾಗಿ, ತುಪ್ಪ ಮಾರುವ ಕೆಲಸ ಐಂದ್ರಿತಾಗೆ ದೊರೆತಿದೆ. ಐಂದ್ರಿತಾ ಚಿತ್ರರಂಗ ಪ್ರವೇಶಿಸಿದ್ದೇ ಮಹೇಶ್‌ಬಾಬು ನಿರ್ದೇಶನದ 'ಮೆರವಣಿಗೆ' ಮೂಲಕ. ಆ ಕಾರಣದಿಂದಲೇ ಬಾಬು ಕರೆಗೆ ಓಗೊಟ್ಟು ಬಸಂತಿಯಾಗಲು ಒಪ್ಪಿಕೊಂಡರಂತೆ.

# ಚಿಟ್ಟೆ ಸ್ವಾಮಿ ಮತ್ತು ರಾಣಿ!



ಚಿಟ್ಟೆ ಸ್ವಾಮಿ ಎನ್ನುವ ಓರ್ವ ಸ್ವಾಮೀಜಿ! ಚಿಟ್ಟೆ ರಾಣಿ ಎನ್ನುವ ಮೈ ಕೈ ತುಂಬಿಕೊಂಡ ಹೆಣ್ಣುಮಗಳು! ಸ್ವಾಮಿ ಪಾತ್ರದಲ್ಲಿ ರವಿಶಂಕರ್; ರಾಣಿಯಾಗಿ ನೀತು!

ನಿರ್ದೇಶಕ ಲಕ್ಕಿ ಶಂಕರ್ ತಮ್ಮ ಚಿತ್ರದ ಪಾತ್ರಗಳನ್ನು ಬಣ್ಣಿಸುತ್ತಿದ್ದರೆ, 'ಇದು ಸ್ವಾಮೀಜಿಗಳ ವಿಡಂಬನೆಯ ಚಿತ್ರ ಇರಬೇಕು' ಎಂದು ಅನ್ನಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಈ ಅನುಮಾನವನ್ನು ಚಿವುಟಿ ಹಾಕುವಂತೆ ನಿರ್ದೇಶಕರು– 'ದೇವ್ರಾಣೆಯಾಗಿಯೂ ಇದು ಯಾವುದೇ ಸ್ವಾಮೀಜಿಯ ವಿಡಂಬನೆ ಸಿನಿಮಾ ಅಲ್ಲ' ಎಂದರು. ಅಂದ ಹಾಗೆ, ಚಿತ್ರದ ಹೆಸರೇ 'ದೇವ್ರಾಣೆ'.

'ಸಮಾಜದಲ್ಲಿ ದೇವರು ದುರ್ಬಳಕೆ ಮತ್ತು ಸದ್ಬಳಕೆಗೆ ಒಳಗಾಗುತ್ತಿರುವ ಕುರಿತು ನಮ್ಮ ಸಿನಿಮಾ ಮಾತನಾಡುತ್ತದೆ. ಸ್ವಾಮೀಜಿ ಪಾತ್ರವೂ ಕಥೆಯಲ್ಲಿದೆ. ಸ್ವಾಮೀಜಿಗಳು ತೊಡುವ ಕಾವಿ ಬೆಂಕಿ ಇದ್ದಂತೆ ಎನ್ನುವ ಸಂದೇಶ ಚಿತ್ರದ್ದು' ಎಂದು ಶಂಕರ್ 'ದೇವ್ರಾಣೆ'ಯ ಕಥಾಹಂದರದ ಸುಳಿವು ಬಿಟ್ಟುಕೊಟ್ಟರು.

'ದೇವ್ರಾಣೆ'ಯ ಗೀತೆಗಳ ಧ್ವನಿಮುದ್ರಿಕೆ ಕಳೆದ ವಾರ ಬಿಡುಗಡೆಯಾಯಿತು. ಆದರೆ, ಚಿತ್ರದ ಗೀತೆಗಳು, ವಿಶೇಷವಾಗಿ 'ಮೈ ನೇಮ್ ಈಸ್ ಚಿಟ್ಟೆಸ್ವಾಮಿ..' ಎನ್ನುವ ಗೀತೆ ಈಗಾಗಲೇ ಅಪಾರ ಜನಪ್ರಿಯತೆ ಗಳಿಸಿದೆ. ಗೀತೆಗಳ ಈ ಜನಪ್ರಿಯತೆ ಸಿನಿಮಾಕ್ಕೆ ಒಳ್ಳೆಯ ಓಪನಿಂಗ್ ದೊರಕಿಸಿಕೊಡಲಿದೆ ಎನ್ನುವ ನಿರೀಕ್ಷೆ ಲಕ್ಕಿ ಶಂಕರ್ ಅವರದ್ದು.

■ ರಘು